I/543763/2024

**ಕರ್ನಾಟಕ ಸರ್ಕಾರ**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂ: ತಾಂ.ಶಿ.ಇ 32 ಸಿಡಿಸಿ(1) 2023(ಕ.ನಂ.1266606)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560001,
ದಿನಾಂಕ: 20/01/2024.

**-:ಜ್ಞಾಪನ:-**

**ವಿಷಯ**:- ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ತರಬೇತಿ ಮತ್ತು ಉದ್ಯೋಗಾಧಿಕಾರಿಗಳನ್ನು (Training & Placement Officer-TPO) ನೇಮಿಸುವ ಬಗ್ಗೆ.

**ಉಲ್ಲೇಖ** ಈ ಕಚೇರಿ ಸುತ್ತೋಲೆ ಸಂ: ಡಿಟಿಇ/22/ಸಿಡಿಸಿ(1)/2023, (ಕ.ಸಂ.6358872) ದಿನಾಂಕ:04/09/2023.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಉದ್ಯೋಗ ಹಾಗೂ ಸ್ವ ಉದ್ಯೋಗಗಳ ಅವಕಾಶಗಳ ಬಗ್ಗೆ ನೆರವಾಗಲು ಪ್ರತಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ "ಉದ್ಯೋಗ ಮತ್ತು ತರಬೇತಿ" ಕೋಶವನ್ನು ಕಡ್ಡಾಯವಾಗಿ ಸ್ಥಾಪಿಸಲು ತಿಳಿಸಲಾಗಿದೆ.

ಸದರಿ ಉದ್ಯೋಗ ಮತ್ತು ತರಬೇತಿ ಕೋಶವನ್ನು ಮುನ್ನೆಡಸಲು ಮತ್ತು ಕೆಳಕಂಡ ಸೂಚಿತ ಕರ್ತವ್ಯ / ಜವಾಬ್ದಾರಿಗಳನ್ನು ನಿರ್ವಹಿಸಲು, ಸಂಸ್ಥೆಯ ಹಂತದಲ್ಲಿ ಕ್ರಿಯಾ ಶೀಲ ಉಪನ್ಯಾಸಕರನ್ನು ಆಯ್ಕೆ ಮಾಡಿ "ತರಬೇತಿ ಮತ್ತು ಉದ್ಯೋಗಾಧಿಕಾರಿ" ಯನ್ನಾಗಿ (Training & Placement) ನೇಮಿಸಲು ಪ್ರಾಚಾರ್ಯರಿಗೆ ಸೂಚಿಸಿದೆ. ಸದರಿ ತರಬೇತಿ ಮತ್ತು ಉದ್ಯೋಗಾಧಿಕಾರಿಯು ಕೆಳಕಂಡ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅನುವಾಗುವಂತೆ ಉಪನ್ಯಾಸಕರುಗಳಿಗೆ ಎಐಸಿಟಿಇ ನಿಯಮಾವಳಿಗಳ ಪ್ರಕಾರ ನಿಗದಿಪಡಿಸಿರುವ 40 ಗಂಟೆಗಳ ಕಾರ್ಯಭಾರದಲ್ಲಿ ಗರಿಷ್ಠ 18 ಗಂಟೆಗಳ ಬೋಧನಾ ಕಾರ್ಯಗಳನ್ನು ಕಡ್ಡಾಯಗೊಳಿಸಿ, ಉಳಿದ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗ ಮತ್ತು ತರಬೇತಿ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಡೆಸುವಂತೆ ಸೂಚಿಸಿ ಕ್ರಮ ಕೈಗೊಳ್ಳಲು ತಿಳಿಸಿದೆ.

ಸಂಸ್ಥೆಯಲ್ಲಿ ತರಬೇತಿ ಮತ್ತು ಉದ್ಯೋಗಾಧಿಕಾರಿಗಳು ನಿರ್ವಹಿಸಬೇಕಾಗಿರುವ ಕರ್ತವ್ಯ ಮತ್ತು ಜವಾಬ್ದಾರಿಗಳು.

- ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳು "ಉದ್ಯೋಗ ಮತ್ತು ತರಬೇತಿ" ಕೋಶದಲ್ಲಿ ನೊಂದಾಯಿಸಲು ಕ್ರಮ ಕೈಗೊಳ್ಳುವುದು.
- ಸಂಸ್ಥೆಯಲ್ಲಿನ ಪ್ರೋಗ್ರಾಂಗಳಿಗೆ ಸಂಬಂಧಿಸಿದ ಕೈಗಾರಿಕೆ/ವೃತ್ತಿಪರ ಸಂಸ್ಥೆಗಳನ್ನು ಸಂಪರ್ಕಿಸಿ, Industry-Institution interaction ಪ್ರಕ್ರಿಯೆಯನ್ನು ಬಲಪಡಿಸುವುದು.
- ಕೈಗಾರಿಕೆ/ವೃತ್ತಿಪರ ಸಂಸ್ಥೆಗಳ ಬೇಡಿಕೆಯನುಸಾರ ವಿದ್ಯಾರ್ಥಿಗಳಿಗೆ soft skill ಮತ್ತು Job role ಗಳ ಬಗ್ಗೆ ತರಬೇತಿಯನ್ನು ಆಯೋಜಿಸುವುದು.
- ಪ್ರತಿ ವರ್ಷ ಪರಿಣಿತರಿಂದ ಸಂಸ್ಥೆಯಲ್ಲಿನ ವಿದ್ಯಾರ್ಥಿಗಳಿಗೆ "Career Guidance" ಕಾರ್ಯಗಾರವನ್ನು ಆಯೋಜಿಸುವುದು.

- ಸಂಸ್ಥೆಯ ವಿದ್ಯಾರ್ಥಿಗಳಿಗೆ Internship / Industry visit / Industry Class/Workshop/Seminar ಗಳನ್ನು ಆಯೋಜಿಸಲು, ಕೈಗಾರಿಕೆ ಮತ್ತು ವೃತ್ತಿಪರ ಸಂಸ್ಥೆಗಳನ್ನು ಸಂಪರ್ಕಿಸುವುದು.
- ವಿವಿಧ ಕೈಗಾರಿಕೆಗಳು/ವೃತ್ತಿಪರ ಸಂಸ್ಥೆಗಳಿಂದ Campus Recruitment ನ್ನು ಸಂಸ್ಥೆಯಲ್ಲಿ ಆಯೋಜಿಸುವುದು ಮತ್ತು ವಿದ್ಯಾರ್ಥಿಗಳು ಪಡೆದ ಉದ್ಯೋಗ ಅಥವಾ ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆದಿರುವ ಬಗ್ಗೆ ದತ್ತಾಂಶವನ್ನು ದಾಖಲಿಸುವುದು.
- ಮೇಲ್ಕಂಡ ಚಟುವಟಿಕೆಗಳನ್ನು ಸಂಸ್ಥೆಯಲ್ಲಿ ನಡೆಸಲು ವೆಚ್ಚದ ಅವಶ್ಯಕತೆ ಇದ್ದಲ್ಲಿ ಸಂಸ್ಥೆಯಲ್ಲಿನ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ / ವಿದ್ಯಾರ್ಥಿ ಸಂಘದ ನಿಧಿಯಿಂದ ನಿಯಮಾನುಸಾರ ಭರಿಸುವುದು.
- ಸಂಸ್ಥೆಯ ಹಂತದಲ್ಲಿ ಕೈಗಾರಿಕೆ/ವೃತ್ತಿಪರ ಸಂಸ್ಥೆಗಳ ಜೊತೆ ಉದ್ಯೋಗ ಮತ್ತು ತರಬೇತಿಗಾಗಿ ಒಡಂಬಡಿಕೆಗಳನ್ನು ಏರ್ಪಡಿಸಲು ಕ್ರಮ ಕೈಗೊಳ್ಳುವುದು.
- ಮೇಲ್ಕಂಡ ಎಲ್ಲಾ ಚಟುವಟಿಕೆಗಳ ತ್ರೈಮಾಸಿಕ ವರದಿಯನ್ನು ಸಂಸ್ಥೆಯ IQAC ಗೆ ಪ್ರಾಚಾರ್ಯರ ಮುಖಾಂತರ ಸಲ್ಲಿಸುವುದು.
- ಸಂಸ್ಥೆಯ Alumni Association ನಲ್ಲಿ ತರಬೇತಿ ಮತ್ತು ಉದ್ಯೋಗಾಧಿಕಾರಿಯು ಸಕ್ರಿಯ ಸದಸ್ಯರಾಗಿ ಭಾಗವಹಿಸುವುದು.
- ಸಂಸ್ಥೆಯಲ್ಲಿ ಪ್ರತಿ ಸೆಮಿಸ್ಟರ್ ಅವಧಿಯಲ್ಲಿ ಕನಿಷ್ಠ ಒಂದು ಬಾರಿ Alumni Association ಸಭೆಯನ್ನು ಆಯೋಜಿಸಲು ಕ್ರಮ ವಹಿಸುವುದು.

**"ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ".**

ಜಂಟಿ ನಿರ್ದೇಶಕರು (ಸಿಡಿಸಿ)

20/1/2024

ಇವರಿಗೆ:

ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ- ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಆಯುಕ್ತರ ಆಪ್ತ ಶಾಖೆ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಮಾಹಿತಿಗಾಗಿ.
2. ನಿರ್ದೇಶಕರ ಆಪ್ತಶಾಖೆ, ತಾಂ.ಶಿ.ಇ., ಬೆಂಗಳೂರು- ಮಾಹಿತಿಗಾಗಿ.
3. ಇ-ಆಡಳಿತ ವಿಭಾಗ, ತಾಂ.ಶಿ.ಇ., ಬೆಂಗಳೂರು-ಡಿ.ಟಿ.ಇ. ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು.